ದಿನಾಂಕ 05-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರ ಶ್ರೀ ಎಫ್.ಬಿ.ಎಂ ವಕೀಲರಿಂದಃ**

1. ನಾನು ದ್ವಿತೀಯ ಪಿ.ಯು.ಸಿಯಲ್ಲಿ ನಪಾಸು ಆಗಿರುತ್ತೇನೆ. ನಾನು ದಿಃ 06-02-1990 ರಲ್ಲಿ ಜನಿಸಿರುತ್ತೇನೆ. ನನ್ನ ಹೆಸರಿನಲ್ಲಿ ಸ್ವಂತ ಮನೆ ಇರುವುದಿಲ್ಲ. ನಾನು ಇರುವ ಮನೆಯು ನನ್ನ ತಾಯಿ ಹೆಸರಿನಲ್ಲಿದ್ದು, ಅದರ ಸಂಖ್ಯೆ ಗೊತ್ತಿಲ್ಲ. ನಾನು ವಾಸಿಸುವ ಮನೆಯಿಂದ ದಾವಾ ಆಸ್ತಿಯು ತುಂಬಾ ದೂರದಲ್ಲಿದೆ. 1999 ನೇ ಇಸವಿಯಲ್ಲಿ ನಾನು 3 ನೇ ತರಗತಿಯನ್ನು ವಿದ್ಯಾಭ್ಯಾಸ ಮಾಡುತ್ತಿದ್ದೆ. ಆಸ್ತಿಗಳ ಮಾರಾಟದ ವ್ಯವಹಾರ ಮಾಡುವಾಗ ಗ್ರಾಮದ ಹಿರಿಯರನ್ನು ಮಧ್ಯದಲ್ಲಿ ಸೇರಿಸಿಕೊಂಡು ಮಾತುಕತೆ ನಡೆಯುತ್ತವೆ ಎಂದರೆ ಸರಿ. ದಾವಾ ಆಸ್ತಿಯ ಖರೀದಿ ವ್ಯವಹಾರದಲ್ಲಿ ನಾನು ಭಾಗವಹಿಸಿರಲಿಲ್ಲ. ಸಂಚಕಾರ ಖರೀದಿ ಪತ್ರವನ್ನು ಛಾಪಾ ಕಾಗದದ ಮೇಲೆ ಗ್ರಾಮ ಪಂಚಾಯಿತಿಯಲ್ಲಿ ಬರೆಸಿದ್ದರು. ಸದರಿ ಪತ್ರವನ್ನು ಬರೆಯುವಾಗ ನಾನು ಇರಲಿಲ್ಲ. ಸದರಿ ಕಾಗದಕ್ಕೆ ಸಹಿ ಮಾಡುವಾಗಲೂ ನಾನು ಇರಲಿಲ್ಲ. ಸದರಿ ಸಂಚಕಾರ ಪತ್ರಕ್ಕೆ ನನ್ನ ಗ್ರಾಮದ ವಕೀಲರಾದ ಎಂ.ಪಿ ಮೂಡೂರು, ನಿಂಬವ್ವ, 1 ನೇ ಪ್ರತಿವಾದಿಗಳು ಸಹಿ ಮಾಡಿರುತ್ತಾರೆ. ಸದರಿ ಪತ್ರಕ್ಕೆ ಇನ್ನೂ ಹಲವರು ಸಹಿ ಮಾಡಿದ್ದು, ಅವರ ಹೆಸರುಗಳು ನೆನಪಿಲ್ಲ.

2. ಖರೀದಿ ಸಂಚಕಾರ ಪತ್ರವು ದಿಃ 08-05-1999 ರಲ್ಲಿ ಆಗಿರಬಹುದು. ಸದರಿ ಖರೀದಿ ಕರಾರು ಪತ್ರದಲ್ಲಿ ಮಾರಾಟಕ್ಕೆ ಇಟ್ಟಿದ್ದ ಆಸ್ತಿಯ ಚಕ್ಕುಬಂದಿಯನ್ನು ಬರೆದಿರುತ್ತಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಸದರಿ ಖರೀದಿ ಕರಾರು ಪತ್ರವನ್ನು ಸುಮಾರು ಒಂದು ವರ್ಷದ ಹಿಂದೆ ನೋಡಿರುತ್ತೇನೆ. ಮೊದಲಿಗೆ ದಾವಾ ಆಸ್ತಿಯು ಮಲ್ಲನಗೌಡ ಪಾಟೀಲರವರ ಆಸ್ತಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ನಿಂಬವ್ವ ರವರು ಖರೀದಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮಲ್ಲನಗೌಡ

ರವರಿಗೆ ಅನ್ನಪೂರ್ಣ ಮತ್ತು ರೇಣುಕಾ ಎಂಬ ಇಬ್ಬರು ಮಕ್ಕಳು. ಮಲ್ಲನಗೌಡ ಮರಣ



ಹೊಂದಿದ ನಂತರ ದಾವಾ ಆಸ್ತಿಯನ್ನು ನಿಂಬವ್ವ, ಅನ್ನಪೂರ್ಣ ಮತ್ತು ರೇಣುಕಾ ವಹಿವಾಟು ಮಾಡುತ್ತಿದ್ದರು. ಹಣವನ್ನು ನೀಡುವಾಗ ನಾನು 3 ವಯಸ್ಸಿನವನು ಇದ್ದಾಗ ನೋಡಿರುತ್ತೇನೆ. ಸಂಚಕಾರ ಪತ್ರದಲ್ಲಿ ರೂ.6,900/- ಹಣಕ್ಕೆ ಖರೀದಿಗೆ ಒಪ್ಪಲಾಗಿದ್ದು, ಅದರ ಪೈಕಿ ರೂ.1,000/- ಹಣವನ್ನು ಮುಂಗಡವಾಗಿ ನೀಡಲಾಗಿದೆ ಎಂದು ಬರೆಯಲಾಗಿದೆ. ನಂತರದಲ್ಲಿ ಉಳಿಕೆ ರೂ.5,900/- ನ್ನು ಒಂದೇ ಬಾರಿಗೆ ನೀಡಿದ್ದಾರೆ. ಸದರಿ ಹಣವನ್ನು ನೀಡುವಾಗ ನಾನು ಹಾಜರು ಇರಲಿಲ್ಲ.

3. ದಾವಾ ಆಸ್ತಿಯ ಖಾತೆಯನ್ನು ಬದಲಾಯಿಸುವಾಗ ನಾನು ಹಾಜರು ಇರಲಿಲ್ಲ. ಗ್ರಾಮ ಠಾಣಾದಲ್ಲಿ 1 ನೇ ಪ್ರತಿವಾದಿಗೆ ಆಸ್ತಿ ಇದ್ದು, ಅದನ್ನು ಆತನು ತನ್ನ ಸಹೋದರರಿಗೆ ಬಿಟ್ಟು ಕೊಟ್ಟಿರುತ್ತಾನೆ. ಅದರ ಆಸ್ತಿ ಸಂಖ್ಯೆ ನನಗೆ ಗೊತ್ತಿಲ್ಲ. ಆತನು ತನ್ನ ಆಸ್ತಿಯನ್ನು 2012 ಬಿಟ್ಟು ಕೊಟ್ಟಿರುತ್ತಾನೆ. ಶಿವಕ್ಕ ಕೋಂ ಶಾಂತಪ್ಪ ಚನ್ನಗೌಡರ ರವರ ಜಮೀನನ್ನು ಸುಮಾರು 4 ವರ್ಷಗಳಿಂದ ವಹಿವಾಟು ಮಾಡುತ್ತಿದ್ದೇನೆ. ಆಕೆ ಮತ್ತು ನನ್ನ ನಡುವೆ ಜಮೀನಿನ ಮಾರಾಟದ ಬಗ್ಗೆ ತಕರಾರುಗಳು ಮೊದಲಿಗೆ ಇದ್ದು, ನಂತರದಲ್ಲಿ ಸರಿಪಡಿಸಿಕೊಂಡಿರುತ್ತೇವೆ.

4. ಸದರಿ ಶಿವಕ್ಕರವರು ವಾದಿಗೆ ದೊಡ್ಡಪ್ಪನ ಮಗಳು. ನಾನು ಎಂದಿಗೂ ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿಲ್ಲ. ಸದರಿ ಶಿವಕ್ಕ ನನ್ನ ನಡುವೆ ಜಮೀನಿನ ವಿಚಾರವಾಗಿ ಸಮಸ್ಯೆಗಳು ಆದಾಗ ಆಕೆಯ ಪರವಾಗಿ ವಾದಿಯು ನಿಂತಿದ್ದರಿಂದ, ಸದರಿ ವೈಮನಸ್ಸನ್ನು ಇಟ್ಟುಕೊಂಡು ವಾದಿಯ ವಿರುದ್ದವಾಗಿ ಮತ್ತು ಪ್ರತಿವಾದಿಗಳ ಪರವಾಗಿ ಪ್ರಕರಣದ ಬಗ್ಗೆ ಮತ್ತು ದಾವಾ ಆಸ್ತಿಯ ಬಗ್ಗೆ ಹಾಗೂ ಖರೀದಿ ವ್ಯವಹಾರದ ಬಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಂಬವ್ವ ರವರು ದಾವಾ ಆಸ್ತಿಯನ್ನು 1 ನೇ

ಪ್ರತಿವಾದಿಗೆ ಮಾರಾಟ ಮಾಡದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1999 ರ ಖರೀದಿ ಕರಾರು ಪತ್ರವನ್ನು ಇತ್ತೀಚೆಗೆ 1 ನೇ ಪ್ರತಿವಾದಿ ನನ್ನನ್ನು



ಮತ್ತು ಇತರರನ್ನು ಮಿಲಾಪಿ ಆಗಿ ಸೃಷ್ಟಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಪರವಾನಿಗೆ ಆಧಾರದ ಮೇಲೆ ಕಬ್ಜೆಯಲ್ಲಿ ಇದ್ದನು ಎಂದರೆ ಸರಿಯಲ್ಲ. ಇಂದಿಗೂ 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಕಾನೂನಿಗೆ ವಿರುದ್ದವಾಗಿ ಕಬ್ಜೆ ಹೊಂದಿದ್ದಾನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ